# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 320 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) |
| **ವಿಷಯ** | : | ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರಾದ ಕಾಮಗಾರಿಗಳ ಕುರಿತು. |
| **ಉತ್ತರಿಸುವ ಸಚಿವರು** | : | ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. |
| **ಉತ್ತರಿಸುವ ದಿನಾಂಕ:** | : | 06-03-2020. |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ) | 2018-19 ಮತ್ತು 2019-20ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರಾದ ಕಾಮಗಾರಿಗಳೆಷ್ಟು; ಅನುಷ್ಠಾನಗೊಂಡ ಕಾಮಗಾರಿಗಳೆಷ್ಟು; ಪ್ರಗತಿಯಲ್ಲಿರುವ ಕಾಮಗಾರಿಗಳೆಷ್ಟು; | 2018-19 ಮತ್ತು 2019-20ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಮೂಜೂರಾದ ಕಾಮಗಾರಿಗಳು, ಅನುಷ್ಠಾನಗೊಂಡ ಕಾಮಗಾರಿಗಳು ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ ಈ ಕೆಳಗಿನಂತಿರುತ್ತದೆ. (see table below) |
| ಆ) | ಪ್ರವಾಸೋದ್ಯಮ ಇಲಾಖೆಯಿಂದ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 'ಯಾತ್ರಿ' ಭವನಗಳ ನಿರ್ವಹಣೆಗಳು ಇಲಾಖೆಯಿಂದ ಮಾಡಲಾಗಿದೆಯೇ; ಇದರಿಂದ ಬರುವ ಆದಾಯ ಎಷ್ಟು? (ವಿವರ ನೀಡುವುದು) | ಪ್ರವಾಸೋದ್ಯಮ ಇಲಾಖೆಯಿಂದ ನಿರ್ಮಾಣ ಮಾಡಲಾಗಿರುವ ಯಾವುದೇ ಯಾತ್ರಿ ನಿವಾಸಗಳನ್ನು ಇಲಾಖೆಯಿಂದ ನೇರವಾಗಿ ನಿರ್ವಹಣೆ ಮಾಡುವುದಿಲ್ಲ. ಆದರೆ, ರಾಜ್ಯದ ಪ್ರವಾಸಿ ತಾಣಗಳ ಬಳಿ ನಿರ್ಮಿಸುವ ಯಾತ್ರಿನಿವಾಸ/ಡಾರ್ಮಿಟರಿಗಳನ್ನು ನಿವೇಶನ ಒದಗಿಸಿದ ಸಂಬಂಧಪಟ್ಟ ಟ್ರಸ್ಟ್‌ಗಳು/ಇಲಾಖೆ/ಸಮಿತಿ/ಮಠಗಳಿಗೆ ನಿರ್ವಹಣೆಗಾಗಿ ವಹಿಸಲಾಗುತ್ತದೆ. ಆದ್ದರಿಂದ ಇಲಾಖೆಗೆ ಯಾವುದೇ ಆದಾಯ ಬರುವುದಿಲ್ಲ. |
| ಇ) | ಪ್ರವಾಸೋದ್ಯಮ ಇಲಾಖೆಯಿಂದ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ನಿಗಮ ಮಂಡಳಿಗಳು ಲಾಭದಲ್ಲಿ ಇದೆಯೇ; ಇಲ್ಲದ್ದಿದಲ್ಲಿ ಇದರ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಇವೆ |
| ಈ) | ಪ್ರವಾಸೋದ್ಯಮ ಇಲಾಖೆಯ ಕಾಮಗಾರಿಗಳು ಕಳಪೆ ಮಟ್ಟದಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಈ ಬಗ್ಗೆ ಕಾಮಗಾರಿ ನಿರ್ವಹಿಸುವ ಏಜೆನ್ಸಿಗಳ ವಿವರ ನೀಡುವುದು? | ಇಲ್ಲ |

| ಕ್ರ. ಸಂ | ವರ್ಷ | ಮಂಜೂರಾದ ಕಾಮಗಾರಿಗಳು | ಅನುಷ್ಠಾನಗೊಂಡ ಕಾಮಗಾರಿಗಳು | ಪ್ರಗತಿಯಲ್ಲಿರುವ ಕಾಮಗಾರಿಗಳು |
|---|---|---|---|---|
| 1. | 2018-19 | 354 | 26 | 82 |
| 2. | 2019-20 | 305 | 0 | 62 |

ಕಡತ ಸಂಖ್ಯೆ: ಟಿಓಆರ್ 28 ಟಿಡಿವಿ 2020

(ಸಿ.ಟಿ.ರವಿ)
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.